## (ಎ) ರಾಷ್ಟ್ರೀಯ ಭದ್ರತಾ ಯೋಜನೆ ಬಗ್ಗೆ

**ಶ್ರೀ ಧ್ರುವನಾರಾಯಣ್ (ಸಂತೇಮಾರನಹಳ್ಳಿ)** : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಭದ್ರತಾ ಯೋಜನೆಯಡಿ ತಲಾ ಹತ್ತು ಸಾವಿರ ರೂಪಾಯಿಗಳಂತೆ ಇದುವರೆಗೂ 1 ಕೋಟಿ 25 ಲಕ್ಷ ರೂಪಾಯಿಗಳನ್ನು ಸರ್ಕಾರ ಮರುಪಾವತಿಸಬೇಕಾಗಿದೆ. 2002 ರಿಂದ 2004ರವರೆಗೆ ಇದುವರೆಗೆ ಸುಮಾರು 1250 ಪ್ರಕರಣಗಳಲ್ಲಿ 1 ಕೋಟಿ 25 ಲಕ್ಷ ರೂಪಾಯಿಗಳು ಮರುಪಾವತಿಯಾಗಬೇಕಾಗಿದೆ. ಸರ್ಕಾರದಿಂದ ಸದರಿ ಯೋಜನೆಯಡಿಯಲ್ಲಿ ಒದಗಿಸಬೇಕಾದ ನೆರವನ್ನು ತಕ್ಷಣ ಒದಗಿಸಿಕೊಡಬೇಕೆಂದು ಸರ್ಕಾರದ ಮೊರೆ ಹೋಗುತ್ತೇನೆ.

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ಸಚಿವರು)** : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರಶ್ನೋತ್ತರ ವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಸರ್ಕಾರ ಇದರ ಬಗ್ಗೆ ಖಂಡಿತವಾಗಿಯೂ ಗಮನಹರಿಸಿ ಅವರಿಗೆ ಸರಿಯಾದ ಉತ್ತರ ಕಳುಹಿಸಿಕೊಡುತ್ತದೆ.

**ಅಧ್ಯಕ್ಷರು** : ಈಗ ಮುಂದಿನ ವಿಚಾರಕ್ಕೆ ಹೋಗೋಣ.

(ಹುಲವಾರು ಮಾನ್ಯ ಸದಸ್ಯರುಗಳು ವಿಷಯ ಪ್ರಸ್ತಾಪಿಸಲು ತಮಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಒಟ್ಟಿಗೆ ಎದ್ದು ನಿಂತು ಅಧ್ಯಕ್ಷರನ್ನು ಕೋರುತ್ತಿದ್ದರು)

**ಅಧ್ಯಕ್ಷರು** : ಒಂದು ವಿಚಾರವನ್ನು ಮಾನ್ಯ ಸದಸ್ಯರುಗಳು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ವಾಟಾಳ್ ನಾಗರಾಜ್** : ಅಧ್ಯಕ್ಷರೆ, ತಮ್ಮ ಕಾರ್ಯಾಲಯಕ್ಕೆ ಬಂದು ತಮ್ಮನ್ನು ಕಾಡಿ, ಬೇಡಿ ವಿಷಯ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೇಳಿದಾಗ ಅವಕಾಶ ಕೊಡುವುದಾಗಿ ಹೇಳಿದ್ದಿರಿ.

**ಅಧ್ಯಕ್ಷರು** : ತಾವು ಆ ವಿಷಯವನ್ನು ಪದೇ ಪದೇ ಪ್ರಸ್ತಾಪಿಸುತ್ತಿದ್ದೀರಲ್ಲ.

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್** : ಅಧ್ಯಕ್ಷರೆ, ದಿವಸಕ್ಕೊಂದು ಸಲ ವಾಟಾಳ್ ನಾಗರಾಜ್‌ರಿಗೆ ಮಾತನಾಡಲು ಅವಕಾಶ ಕೊಡದಿದ್ದರೆ ಹೇಗೆ?

## (ಏ) ಗೋವಾದಲ್ಲಿ ನಿರಾಶ್ರಿತ ಕನ್ನಡಿಗರಿಗೆ ಅಕ್ಕಿ, ಪಾತ್ರೆ ಇತ್ಯಾದಿ ಸರಬರಾಜು ಮಾಡುವ ಬಗ್ಗೆ

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** : ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಗೋವಾದಲ್ಲಿರುವ ನಿರಾಶ್ರಿತ ಕನ್ನಡಿಗರಿಗೆ ನಮ್ಮ ಪಕ್ಷದವರು ಇಲ್ಲಿಂದ ಅಕ್ಕಿ, ಪಾತ್ರೆ ಇನ್ನಿತರ ಅಗತ್ಯ ವಸ್ತುಗಳೆಲ್ಲವನ್ನೂ ತೆಗೆದುಕೊಂಡು ಅವರಿಗೆ ತಲುಪಿಸಬೇಕೆಂದು ಹೊರಟಾಗ ರಾಜ್ಯದ ಗೋವಾ ಗಡಿಯಲ್ಲಿ ಪೊಲೀಸ್ ಅವರನ್ನು ತಡೆಹಿಡಿಯುವ ಮೂಲಕ ಹೊರಗಡೆ ಕಳುಹಿಸಿದರು. 'ನಾವು ಅವರಿಗಾಗಿ ಅಕ್ಕಿ, ಪಾತ್ರೆ ತೆಗೆದುಕೊಂಡು ಹೋಗುತ್ತಿದ್ದೇವೆ' ಎಂದು ಅವರು ಕಾಡಿ, ಬೇಡುತ್ತಿದ್ದರೂ, 'ಇಲ್ಲ. ಸಾಧ್ಯವಿಲ್ಲ. ನಿಮ್ಮನ್ನು ರಾಜ್ಯದೊಳಗೆ ಬಿಡುವುದಿಲ್ಲ' ಎಂದು ತಡೆಹಿಡಿದು ನಿರಂತರವಾಗಿ ಅವರಿಗೆ ತೊಂದರೆ ಕೊಟ್ಟು ಪೊಲೀಸರ ದೊಡ್ಡ ಕಾವಲನ್ನು ಹಾಕಿ ಅವರುಗಳನ್ನು ಚಾಮರಾಜನಗರಕ್ಕೆ ಹಿಂದಕ್ಕೆ ಕಳುಹಿಸಿದರು. ಗೋವಾ ರಾಜ್ಯವೇನು ಪೋರ್ಚುಗೀಸರ ರಾಜ್ಯವೇ ಅಥವಾ ಬೇರೆ ದೇಶವೇ? ಅಲ್ಲಿನ ಪರಿಸ್ಥಿತಿ ಆ ರೀತಿ ಇರುವಾಗ ಕನ್ನಡಿಗರ ಸಮಸ್ಯೆ ಆಲಿಸಲು ತೆರಳಿದ್ದ ಕರ್ನಾಟಕ ಸರ್ಕಾರದ ನಿಯೋಗದ ಪ್ರಯತ್ನವೂ ವಿಫಲವಾಯಿತು. ಅಲ್ಲಿ ಕನ್ನಡಿಗರನ್ನು ಕೇಳುವವರೇ ಗತಿಯಿಲ್ಲ. ರಾಜ್ಯದಿಂದ ಅಲ್ಲಿನ ಗೃಹ